ಕಿ.ಮಿ.ಗೇ ಮೊದಲು ಇದ್ದ ದರ 40 ಪೈಸೆಯನ್ನು 44 ಪೈಸೆಗೆ ಹೆಚ್ಚಿಸಿ ದಿನಾಂಕ 04-10-2000 ದಂದು ಜಾರಿಗೊಳಿಸಿದ್ದು, ಸದರಿ ದರಗಳು ಸರ್ಕಾರದ ಅಧಿಸೂಚನೆ ಸಂಖ್ಯೆ /ಹೆಚ್‌ಟಿಡಿ/91 ಟಿಎಂಎ 96, ದಿನಾಂಕ 14-11-1996 ರಲ್ಲಿ ನಿಗದಿಪಡಿಸಿರುವ ದರಗಳ ಮಿತಿಯೊಳಗೆ ಮತ್ತು ಅಧಿಸೂಚನೆಯಲ್ಲಿ ನೀಡಿರುವ ನಿರ್ದೇಶನದ ಮೇರೆಗೆ ಇರುತ್ತದೆ. ಖಾಸಗೀ ಬಸ್ ಮಾಲೀಕರು ಈ ದರವನ್ನು ವಸೂಲು ಮಾಡಬೇಕಾಗುತ್ತದೆ.

ಇ) ನಿಗದಿತ ದರಕ್ಕಿಂತ ಹೆಚ್ಚಿಗೆ ವಸೂಲಿ ಮಾಡುತ್ತಿರುವ ಪ್ರಕರಣಗಳು ಕಂಡುಬಂದಲ್ಲಿ ವಾಹನಗಳ ತನಿಖಾ ಕಾರ್ಯವನ್ನು ಚುರುಕುಗೊಳಿಸುವುದು ಮತ್ತು ಮೋಟಾರು ವಾಹನ ಕಾಯ್ದೆ ಅಡಿ ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಬಾಗಲಗುಂಟೆ ಗ್ರಾಮದ ಸ.ನಂ. 97ರ ಸರ್ಕಾರಿ ಗುಂಡು ತೋಪಿನ ಕಬಳಿಕೆ

4833 - ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಬಾಗಲಗುಂಟೆ ಗ್ರಾಮದ ಸರ್ವೆ ನಂ. 97ರಲ್ಲಿ ಸರ್ಕಾರಿ ಗುಂಡು ತೋಪು ಇದ್ದು, ಅದನ್ನು ಭೂಗಳ್ಳರು ಕಬಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಗುಂಡು ತೋಪನ್ನು ಉದ್ಯಾನವನಕ್ಕಾಗಿ ಮೀಸಲಿಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?*

ಇ) *ಅಕ್ರಮವಾಗಿ ಕಟ್ಟಲ್ಪಟ್ಟಿರುವ ಮನೆಗಳನ್ನು ತೆರವುಗೊಳಿಸಲು ವಿಶೇಷ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡುವುದೇ?*

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ.

ಆ) ಪರಿಶೀಲಿಸಲಾಗುವುದು.

ಇ) ಅಕ್ರಮವಾಗಿ ಕಟ್ಟಿರುವ ಮನೆಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುತ್ತಿದ್ದಾರೆ.

ಉತ್ತರಹಳ್ಳಿ ಕ್ಷೇತ್ರದ ಕೊಡಿಗೇಹಳ್ಳಿ ಗ್ರಾಮಸ್ಥರಿಗೆ ಸ್ಮಶಾನಕ್ಕಾಗಿ ಜಮೀನು ಮಂಜೂರು

4834 - ಶ್ರೀ ಅಶೋಕ್ .ಆರ್ (ಉತ್ತರಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?